ದಿನಾಂಕ **20-06-2022** ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಆರ್.ಜಿ ವಕೀಲರವರಿಂದ

ಈ ದಿನ ನ್ಯಾಯಾಲಯದಲ್ಲಿ ವಾದಿ-1 ಹಾಜರಿದ್ದಾರೆ. ಸರ್ವೆ ನಂಃ 35 ರಲ್ಲಿ ಇಬ್ಬರು ಪಟ್ಟೆದಾರರು ಇರುತ್ತಾರೆ. ಸರ್ವೆ ನಂಃ 35/2 ರಲ್ಲಿ 2 ಎಕರೆ 35 ಗುಂಟೆ ಮತ್ತು ಸರ್ವೆ ನಂಃ 35/2 ರಲ್ಲಿ 2 ಎಕರೆ 24 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಪಹಣಿ ಪತ್ರಿಕೆ ಬರುತ್ತಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸರ್ವೆ ನಂಃ 36 ರಲ್ಲಿ ಪ್ರತಿವಾದಿಗಳು ಪಟ್ಟೆದಾರರಾಗಿದ್ದು ಬೇರೆ ಯಾರು ಪಟ್ಟೆದಾರರಾಗಿತ್ತಾರೆಂದು ನನಗೆ ಗೊತ್ತಿಲ್ಲ. 2007 ರಲ್ಲಿ ನನ್ನ ಹೆಸರಿಗೆ ಪಹಣಿ ಪತ್ರಿಕೆ ಬದಲಾವಣೆಯಾಗಿರುತ್ತದೆ.

ಮಧುವೆಯಾದ 3-4 ವರ್ಷಗಳ ನಂತರ ನಾನು ಜಮೀನುಗಳಿಗೆ ಹೋಗಲು ಆರಂಬಿಸಿರುತ್ತೇನೆ. ನಾನು ಜಮೀನಿಗೆ ಹೋಗಲು ಆರಂಬಿಸಿದ ನಂತರ ಹಾಗೂ ಇವತ್ತಿಗೂ ನನಗೆ ಸರ್ವೆ ನಂಃ 35/1 ರಲ್ಲಿ ಮತ್ತು ಸರ್ವೆ ನಂಃ 35/2 ರಲ್ಲಿ ಯಾವುದೇ ವೆಕ್ತಿಗಳು ತೊಂದರೆ ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ಸರ್ವೆ ನಂಃ 36/3 ರಲ್ಲಿ 3 ಎಕರೆ 22 ಗುಂಟೆ ಜಮೀನು ದೋಂಡಿಬಾ ಮತ್ತು ಅಮೃತ ಅವರ ಹೆಸರಿಗೆ ಇಲ್ಲಿಯವರೆಗೆ ಬರುತ್ತಿದೆಯೆಂದರೆ ಸರಿ. ದೋಂಡಿಬಾ ಮತ್ತು ಅಮೃತ ಅವರ ಮರಣಾನಂತರ ಪ್ರತಿವಾದಿಗಳು ಸರ್ವೆ ನಂಃ 36/3 ರಲ್ಲಿ 3 ಎಕರೆ 22 ಗುಂಟೆ ಜಮೀನಿನ ಸ್ವಾಧೀನದಾರರಾಗಿದ್ದು ಅವರೇ ಮಾಲೀಕರಾಗಿದ್ದು ಅವರೆ ಉಳುಮೆ ಮಾಡುತ್ತಿದ್ದಾರೆಂದರೆ ಸರಿ.

ಪ್ರಶ್ನೆಃ- ಸರ್ವೆ ನಂಃ 36 ಕ್ಕೆ ಸಂಬಂಧಿಸಿದಂತೆ ನನಗೂ ಹಾಗೂ ನನ್ನ ಪೂರ್ವಜರಿಗೂ ಯಾವುದೇ ಸಂಬಂದವಿಲ್ಲ?

ಉತ್ತರಃ- ಪೂರ್ವಜರಿಗೆ ಸಂಬಂಧವಿರಲಿಲ್ಲ ನನಗೆ ಸಂಬಂಧವಿದೆಯೆಂದು ಹೇಳುತ್ತಾರೆ.

ನಿಪಿ-1 ಅನ್ನು ತಹಸೀಲ ಕಛೇರಿಯಿಂದ ಪಡೆದಿರುತ್ತೇನೆ. ನಿಪಿ-1 ದಾಖಲೆಯನ್ನು ನಾನು ಮತ್ತು ಇತರೆ ವಾದಿಗಳು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ.

ನಿಪಿ-10 ರಲ್ಲಿ ಪ್ರತಿವಾದಿಗಳ ಸಹಿ ಇರುವುದಿಲ್ಲವೆಂದರೆ ಸರಿಯಲ್ಲ. ನಿಪಿ-10 ದಾಖಲೆಯನ್ನು ನಾನು ಮತ್ತು ಇತರ ವಾದಿಗಳು ಸರ್ವೆ ನಂಃ 36 ಕ್ಕೆ ಸಂಬಂಧಿಸಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ.

ನಿಪಿ-2 ಅರ್ಜಿಯ ಅಧಾರದ ಮೇಲೆ ತಹಸೀಲ್ದಾರರವರು ಕ್ರಮ ಕೈಗೊಂಡಿದ್ದು ಆದೇಶ ಮಾಡಿರುತ್ತಾರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-2 ಅರ್ಜಿಯ ಅಧಾರದ ಮೇಲೆ ತಹಸೀಲ್ದಾರರವರು ಯಾವುದೇ ಅದೇಶ ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು ರಾಜೀ ಮಾಡಿಕೊಳ್ಳಲು ಹೇಳಿರುತ್ತಾರೆಂದು ಹೇಳುತ್ತಾರೆ. ತಹಸೀಲ ಕಛೇರಿಯಲ್ಲಿ ದಾಖಲು ಮಾಡಿರುವ ಕೇಸಿಗೆ ಇತರ ವಾದಿಗಳು ಸಹ ಹಾಜರಾಗುತ್ತಿದ್ದರು. ನಾನು ಪ್ರಕರಣಕ್ಕೆ ಹಾಜರಾದ ನಂತರ ನನ್ನ ಸಹಿಗಳನ್ನು ಪಡೆಯುತ್ತಿದ್ದರು. ನಿಪಿ-2 ಅರ್ಜಿಯ ಆಧಾರದ ಮೇಲೆ ತಹಸೀಲ್ದಾರರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ

ಸರ್ವೆ ನಂಃ 36/3/1 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿ-4 ಅವರಹೆಸರಿಗೆ ಪಹಣಿ ಪತ್ರಿಕೆ ಬರುತ್ತಿದೆಯೆಂದು ನನಗೆ ಗೊತ್ತಿಲ್ಲ. ಸರ್ವೆ ನಂಃ 36/3/2 ಕ್ಕೆ ಪ್ರತಿವಾದಿ -5 ಅವರಹೆಸರಿಗೆ ಪಹಣಿ ಪತ್ರಿಕೆ ಬರುತ್ತಿದೆಯೆಂದು ನನಗೆ ಗೊತ್ತಿಲ್ಲ.

ದೋಂಡಿಬಾ ಮತ್ತು ಅಮೃತ ಅವರು ಅಣ್ಣ-ತಮ್ಮಂದಿರರಾಗಿದ್ದರೆಂದರೆ ನನಗೆ ಗೊತ್ತಿಲ್ಲ. ದೋಂಡಿಬಾ ತಂದೆ ನರಸೋಬಾ ಅವರಿಗೆ ಮಾಧವ ಅವರು ಮಗ ಆಗಿರುತ್ತಾರೆಂದರೆ ಸರಿ.

ಸರ್ವೆ ನಂಃ 35 ರಲ್ಲಿ ಹಣಮಂತ ಮತ್ತು ಪ್ರಭು ಇವರ ಜಮೀನು ಇದೆ ಎಂದರೆ ಸರಿಯಲ್ಲ. ಹಣಮಂತ ಮತ್ತು ಪ್ರಭು ಅವರಿಗೆ ನಾನು ದಾವಾ ಹಾಕಿರುವ ಕುರಿತು ಮಾಹಿತಿಯಿಲ್ಲವೆಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲವೆಂದು ಹೇಳುತ್ತಾರೆ.

ನಾನು ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆದರೆ ಸರಿಯಲ್ಲ. ದಾಖಲೆಗಳನ್ನು ನನಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

ಸರ್ವೆ ನಂಃ 36 ಕ್ಕೆ ಸಂಬಂಧಿಸಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆದರೆ ಸರಿಯಲ್ಲ.

ಸರ್ವೆ ನಂಃ 36 ರಲ್ಲಿ ನನಗೂ ಮತ್ತು ನನ್ನ ಪೂರ್ವಜರಿಗೂ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿ. ನಾನು ಸುಳ್ಳು ದಾವೆ ದಾಖಲೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

(ಓ.ಹೇ.ಕೇ.ಸ.ಇದೆ) ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ